**ಸಾಕ್ಷಿಯನ್ನು ಅರ್ಜಿಯ ಮೇರೆಗೆ ದಿನಾಂಕ: 16.09.2025 ರಂದು ಕರೆದು ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ 10 ನೇ ಪ್ರತಿವಾದಿಯ ಪರ ಶ್ರೀ RPS ವಕೀಲರಿಂದಃ**

ನಾನು 3 ನೇ ತರಗತಿಯವರೆಗೆ ತಿಗಡೊಳ್ಳಿ ಗ್ರಾಮದಲ್ಲಿ ವಿಧ್ಯಾಭ್ಯಾಸವನ್ನು ಮಾಡಿರುತ್ತೇನೆ. ನನ್ನ ತಂದೆಯ ಹೆಸರು ರಾಮಪ್ಪ ಗಂಗಪ್ಪ ತಳವಾರ. ನನ್ನ ತಂದೆಯು 1982 ರಲ್ಲಿ ಮರಣ ಹೊಂದಿರುತ್ತಾರೆ. ನನ್ನ ತಾಯಿಯು ನನ್ನ ತಂದೆಗಿಂತ ಪೂರ್ವದಲ್ಲಿಯೇ ಮರಣ ಹೊಂದಿರುತ್ತಾರೆ ಆದರೆ ನಿಖರವಾದ ವರ್ಷ ದಿನಾಂಕ ಹೇಳಲು ಬರುವುದಿಲ್ಲ.

ನನ್ನ ತಂದೆತಾಯಿಗೆ ನಾವು ಒಟ್ಟು 5 ಜನ ಗಂಡು ಮಕ್ಕಳು ಹಾಗೂ 2 ಜನ ಹೆಣ್ಣು ಮಕ್ಕಳು. ಗಂಡು ಮಕ್ಕಳೆಂದರೆ ಗಂಗಪ್ಪ, ಬಸಪ್ಪ, ಬಾಳಪ್ಪ, ಸುಭಾಸ ಮತ್ತು ಫಕ್ಕಿರಪ್ಪ ಹಾಗೂ ಹೆಣ್ಣು ಮಕ್ಕಳೆಂದರೆ ಅಕ್ಕವ್ವ ಮತ್ತು ಗುಲಾಬಿ. ನನ್ನ ತಂದೆಯ ಮರಣದ ನಂತರ ನಾವು ವಾರಸಾ ಪ್ರಮಾಣ ಪತ್ರವನ್ನು ಪಡೆದುಕೊಂಡಿರುವುದಿಲ್ಲ. ನಮ್ಮ ತಂದೆಯ ವಾರಸುದಾರರನ್ನು ತೋರಿಸಲು ನ್ಯಾಯಾಲಯಕ್ಕೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ತಂದೆಯ ವಾರಸ ಪ್ರಮಾಣ ಪತ್ರ ಇರುತ್ತದೆ. ಸದರಿ ವಾರಸಾ ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸದರಿ ವಾರಸಾ ಪ್ರಮಾಣ ಪತ್ರವನ್ನು ಹಾಜರುಪಡಿಸದೇ ಇದ್ದರೂ ಸಹ ಹಾಜರುಪಡಿಸಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಾವೆಯಲ್ಲಿ ಒಟ್ಟು 4 ಉತಾರಗಳನ್ನು ಹಾಜರುಪಡಿಸಿರುತ್ತೇನೆ. ದಾವೆಯಲ್ಲಿ ಉತಾರಗಳನ್ನು ಹೊರತು ಪಡಿಸಿ ಬೇರೆ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ.

ಈ ದಾವೆಯನ್ನು ಸರ್ವೆ ನಂ. 10 ರ ಕುರಿತು ಹೂಡಿರುತ್ತೇವೆ. ಸದರಿ ಸರ್ವೆ ನಂ. 10 ರಲ್ಲಿ ಒಟ್ಟು 4 ಹಿಸ್ಸೆಗಳು ಇರುತ್ತವೆ. ಸದರಿ 4 ಹಿಸ್ಸಗಳ ಕ್ಷೇತ್ರ ಎಂದರೆ ಒಂದು ಹಿಸ್ಸೆ 1 ಎಕರೆ 39 ಗುಂಟೆ, ಇನ್ನೊಂದು ಹಿಸ್ಸೆ 1 ಎಕರೆ 2 ಗುಂಟೆ ಹಾಗೂ 15 ಗುಂಟೆ ಮತ್ತು 24 ಗುಂಟೆ.

ಸದರಿ ಹಿಸ್ಸೆಗಳಲ್ಲಿ 1 ಎಕರೆ 39 ಗುಂಟೆ ಮತ್ತು 1 ಎಕರೆ 2 ಗುಂಟೆ ರಂತೆ ಇರುವ ಹಿಸ್ಸೆಗಳನ್ನು ರಮೇಶ ಸಂಭೋಜಿ ಇವರು ಖರೀದಿ ಮಾಡಿಕೊಂಡಿರುತ್ತಾರೆ. ಆದರೆ ಸದರಿ ಖರೀದಿಗೆ ನಾವು ಯಾವುದೇ ಸಮ್ಮತಿಯನ್ನು ಕೊಟ್ಟಿರಲಿಲ್ಲ. ಸದರಿ ಆಸ್ತಿಯನ್ನು ಎಷ್ಟ ಮೊತ್ತಕ್ಕೆ ಖರೀದಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸದ್ಯ 15 ಗುಂಟೆ ಮತ್ತು 24 ಗುಂಟೆ ಆಸ್ತಿ ಮಾತ್ರ ನಮ್ಮ ಹೆಸರಿಗೆ ಇರುತ್ತವೆ ಹಾಗೂ ಸದರಿ ಆಸ್ತಿಗೆ ಮಾತ್ರ ಕಬ್ಜೆ ಇರುತ್ತೇವೆ ಎಂದರೆ ನಿಜ.

10 ನೇ ಪ್ರತಿವಾದಿಯು ಖರೀದಿ ಮಾಡಿಕೊಂಡಿರುವ ಆಸ್ತಿ ಸರ್ವೆ ನಂ. 10/3ಬಿ+4 ಹಾಗೂ 10/2 ರಂತೆ ಇರುವ ಆಸ್ತಿಗಳು ಎಂದರೆ ನಿಜ. ಸದರಿ ಆಸ್ತಿಗಳನ್ನು 10 ನೇ ಪ್ರತಿವಾದಿಯು 2011 ರಲ್ಲಿ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು 2-3 ವರ್ಷಗಳ ನಂತರ ನಮಗೆ ಗೊತ್ತಾಗಿರುತ್ತದೆ. 10 ನೇ ಪ್ರತಿವಾದಿಯು ಆಸ್ತಿಯನ್ನು ಖರೀದಿ ಮಾಡಿದ

ದಿನದಿಂದ ಆಸ್ತಿಯಲ್ಲಿ ಕಬ್ಜಾ ಇರುತ್ತಾರೆ ಎಂದರೆ ಸಾಕ್ಷಿಯು 2011 ರಲ್ಲಿ ನಮ್ಮ ಅಣ್ಣ ಅವರಿಗೆ ಕಬ್ಬಾ ಇರಲು ಅನುಮತಿಯನ್ನು ಕೊಟ್ಟಿದ್ದನು ಎಂದು ಹೇಳುತ್ತಾರೆ. ಆ ಸಮಯದಲ್ಲಿ ನಾವು ದಾಂಡೇಲಿಯಲ್ಲಿದ್ದೆ. ನಾನು ನಮ್ಮ ತಂದೆಯ ಮರಣದ ನಂತರ 8-10 ವರ್ಷಗಳ ಕಾಲ ದಾಂಡೇಲಿಯಲ್ಲಿದ್ದೆ. ಹೀಗೆ ದಾಂಡೆಲೀಯಲ್ಲಿ ವಾಸ ವಾಗುವ ಮುಂಚೆ ತಿಗಡೊಳ್ಳಿಯಲ್ಲಿಯೇ ವಾಸವಾಗಿದ್ದೆ. ನಮ್ಮ ತಂದೆಯ ಮರಣದ ನಂತರ ನಾವೆಲ್ಲ ಅಣ್ಣತಮ್ಮಂದಿರು ಬೇರೆ ಬೇರೆಯಾಗಿ ವಾಸ ಮಾಡುತ್ತಿದ್ದೇವೆ.

1ನೇ ವಾದಿಯು ತಿಗಡೊಳ್ಳಿಯಲ್ಲಿರುವುದಿಲ್ಲ ಎಂದರೆ ನಿಜ. ಸಾಕ್ಷಿಯು ಸದರಿಯವರು ಹೌವಗಿ ಊರಿನ ಮನೆತನಕ್ಕೆ ಮದುವೆ ಮಾಡಿಕೊಟ್ಟಿದ್ದು ಸದ್ಯ ನಾನು ಅವಳ ಮಗಳನ್ನು ಮದುವೆ ಆಗಿ ಅವರ ಜೊತೆಗೆ ನಾನು ಸಹ ಹೌವಗಿ ಗ್ರಾಮದಲ್ಲಿ ವಾಸವಾಗಿರುತ್ತೇನೆ.

1ನೇ ಪ್ರತಿವಾದಿಯು ನನ್ನ ಅಣ್ಣ ಗಂಗಪ್ಪ ನ ಹೆಂಡತಿ ಹಾಗೂ 2ನೇ ಪ್ರತಿವಾದಿಯು ನನ್ನ ಅಣ್ಣನ ಮಗಳು ಎಂದರೆ ನಿಜ. 2ನೇ ಪ್ರತಿವಾದಿಯು ಗುಡಿಕಟ್ಟಿ ಗ್ರಾಮದಲ್ಲಿ ವಾಸವಾಗಿರುತ್ತಾರೆ. 4 ಮತ್ತು 5 ನೇ ಪ್ರತಿವಾದಿಯರು ನಮ್ಮ ಅಣ್ಣ ಗಂಗಪ್ಪನ ಮಕ್ಕಳಿದ್ದು ತಿಗಡೊಳ್ಳಿ ಗ್ರಾಮದಲ್ಲಿ ವಾಸವಾಗಿರುತ್ತಾರೆ. 6 ನೇ ಪ್ರತಿವಾದಿಯು ನಮ್ಮ ಅಕ್ಕ.

ರ್ವೆ ನಂ. 10/3ಬಿ+4 ಹಾಗೂ 10/2 ರಂತೆ ಇರುವ ಆಸ್ತಿಗಳನ್ನು 10 ನೇ ಪ್ರತಿವಾದಿಯು ಖರೀದಿ ಮಾಡಿಕೊಂಡಿರುವ ವಿಷಯವು ಪ್ರತಿವಾದಿ ನಂ. 1 ರಿಂದ 6 ರವರಿಗೆ ಗೊತ್ತಿರುತ್ತದೆ ಎಂದರೆ ಸಾಕ್ಷಿಯು ಸದರಿ ಪ್ರತಿವಾದಿ ನಂ. 1 ರಿಂದ 6

ರವರೆ 10 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ. ಸದರಿ ವಿಷಯ ನನಗೆ 2015 ರಲ್ಲಿ ಗೊತ್ತಾಗಿರುತ್ತದೆ. ಹೀಗೆ ನನಗೆ ಗೊತ್ತಾದ ನಂತರ ನನ್ನ ಅಣ್ಣ ಗಂಗಪ್ಪನ ಹೆಂಡತಿ ಮತ್ತು ಮಕ್ಕಳಿಗೆ ವಿಚಾರಣೆ ಮಾಡಿರುವುದಿಲ್ಲ ಆದರೆ 10 ನೇ ಪ್ರತಿವಾದಿಗೆ ವಿಚಾರಣೆ ಮಾಡಿರುತ್ತೇನೆ. ಸದರಿ ಖರೀದಿ ವಿಷಯದ ಕುರಿತು ನನ್ನ ಅಣ್ಣ ಗಂಗಪ್ಪನ ಹೆಂಡತಿ ಮತ್ತು ಮಕ್ಕಳಿಗೆ ವಿಚಾರಣೆ ಮಾಡಲು ನನಗೆ ಯಾವುದೇ ಅಡಚಣೆ ಇರಲಿಲ್ಲ.

2010-11 ರಲ್ಲಿ ನಮ್ಮ ಅಣ್ಣ ಆರ್ಥಿಕವಾಗಿ ಸಬಲನಾಗಿರಲಿಲ್ಲ ಹಾಗೂ ದುಡಿದು ಜೀವನ ಸಾಗಿಸುವಂತೆ ಇತ್ತು ಎಂದರೆ ನಿಜ. ಸದರಿ ಸಮಯದಲ್ಲಿ ನಮ್ಮ ಅಣ್ಣ ಗಂಗಪ್ಪನ ಮಕ್ಕಳ ವಿವಾಹದ ಸಲುವಾಗಿಯೇ ಆಸ್ತಿಯನ್ನು 10 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ. ಸದರಿ ಆಸ್ತಿಯನ್ನು ಮಾರಾಟ ಮಾಡಿದ ವರ್ಷವೇ ನಮ್ಮ ಅಣ್ಣ ಗಂಗಪ್ಪನ ಮಕ್ಕಳ ವಿವಾಹವಾಗಿರುತ್ತದೆ. ಆ ಸಮಯದಲ್ಲಿ ಗಂಗಪ್ಪನು ತನ್ನ ಮಕ್ಕಳ ವಿವಾಹಕ್ಕೆ ಹಣ ಬೇಕಾಗಿದ್ದರಿಂದ ಆಸ್ತಿಯನ್ನು ಮಾರಾಟ ಮಾಡಿರುತ್ತಾನೆ.

ನಾನು ಸದ್ಯ ಹಳಿಯಾಳದಲ್ಲಿ ಕೂಲಿ ಕೆಲಸ ಮಾಡುತ್ತೇನೆ. ನಾನು ತಿಗಡೊಳ್ಳಿ ಗ್ರಾಮದಲ್ಲಿರುವಾಗ ಸಹ ಗೌಂಡಿ ಕೆಲಸ ಹಾಗೂ ಕೂಲಿ ಕೆಲಸ ಮಾಡುತ್ತಿದ್ದೆ. ನಮ್ಮ ಅಣ್ಣ ಗಂಗಪ್ಪನ ಹೆಂಡತಿ ಮತ್ತು ಮಕ್ಕಳು 2011 ರ ಪೂರ್ವದಲ್ಲಿ ರ್ವೆ ನಂ. 10/3ಬಿ+4 ಹಾಗೂ 10/2 ಗಳಲ್ಲಿ ಸಾಗುವಳಿ ಮಾಡುತ್ತಿದ್ದರು ಎಂದರೆ ನಿಜ. ಸದರಿ ರ್ವೆ ನಂ. 10/3ಬಿ+4 ಹಾಗೂ 10/2 ಗಳಲ್ಲಿ ನಮ್ಮ ಅಣ್ಣ ಗಂಗಪ್ಪನ ಹೆಂಡತಿ ಮತ್ತು ಮಕ್ಕಳು ಮಾಡುತ್ತಿದ ಸಾಗುವಳಿಗೆ

ಹಾಗೂ ಕಬ್ಜೆಗೆ ನಾನು ತಕರಾರು ಮಾಡಿರುವುದಿಲ್ಲ. ಸಾಕ್ಷಿಯು ಮುಂದುವರೆದು ಗಂಗಪ್ಪನ ಹೆಂಡತಿ ಮತ್ತು ಮಕ್ಕಳು ಎರಡು ಗದ್ದೆ ಹಾಗೂ ನಾನು ಎರಡು ಗದ್ದೆಗಳಲ್ಲಿ ಸಾಗುವಳಿ ಮಾಡುತ್ತಿದ್ದೇವು. ನಾವು ಒಟ್ಟು 5 ಜನ ಇದ್ದು ಆಸ್ತಿಗಳಲ್ಲಿ 5 ಹಿಸ್ಸೆಗಳನ್ನು ಮಾಡಿಕೊಂಡು ಸಾಗುವಳಿ ಮಾಡುತ್ತಿದ್ದೇವು.

ಸರ್ವೆ ನಂ. 10/3ಬಿ+4 ಹಾಗೂ 10/2 ಗಳನ್ನು ಖರೀದಿ ಮಾಡಿಕೊಂಡ ವಿಷಯ ನನಗೆ 2015 ರಲ್ಲಿ ನನಗೆ ಗೊತ್ತಾದ ನಂತರ ಈ ದಾವೆಯನ್ನು ಹೂಡುವ ಮುಂಚೆ ನಾನು ಯಾವುದೇ ಪ್ರಕರಣವನ್ನು ಮಾಡಿರುವುದಿಲ್ಲ. 10ನೇ ಪ್ರತಿವಾದಿಯು ನನಗೆ ಪರಿಚಯ ಇರುವುದಿಲ್ಲ. 10 ನೇ ಪ್ರತಿವಾದಿಯು ಎಲ್ಲಿ ಇರುತ್ತಾರೆ ಹಾಗೂ ಏನು ಮಾಡುತ್ತಾರೆ ಎಂದು ಗೊತ್ತಿರುವುದಿಲ್ಲವೇ ಎಂದರೆ ಸಾಕ್ಷಿಯು 2011 ರಲ್ಲಿ ನಮ್ಮ ಆಸ್ತಿಯನ್ನುಖರೀದಿ ಮಾಡಿಕೊಂಡ ನಂತರ ಗೊತ್ತಾಗಿರುತ್ತದೆ ಎಂದರೆ ನಿಜ. 10 ನೇ ಪ್ರತಿವಾದಿಯ ಆಸ್ತಿಯನ್ನು ಖರೀದಿ ಮಾಡಿದಾಗಿನಿಂದ ಸದರಿ ಆಸ್ತಿಯಲ್ಲಿ 10 ನೇ ಪ್ರತಿವಾದಿಯ ಕಬ್ಜೆಗೆ ನಾನು ತಕರಾರು ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ತಕರಾರು ಮಾಡಿರುತ್ತೇನೆ ಆದರೆ 10 ನೇ ಪ್ರತಿವಾದಿಯು ನಿನ್ನನ್ನು ಕಡಿಯುತ್ತೇನೆ ಬಡಿಯುತ್ತೇನೆ ಎಂದು ಧಮಕಿ ಹಾಕಿರುತ್ತಾನೆ ಎಂದು ಹೇಳುತ್ತಾರೆ. ಹೀಗೆ 2018 ರಲ್ಲಿ ಧಮಕಿ ಹಾಕಿರುತ್ತಾನೆ. ಆ ಸಮಯದಲ್ಲಿ ನಾನು ಕಿತ್ತೂರು ಠಾಣೆಗೆ ದೂರು ನೀಡಲು ಹೋಗಿರುತ್ತೇನೆ ಆದರೆ ಪೊಲೀಸರು ನ್ಯಾಯಾಲಯದಲ್ಲಿ ದಾವೆಯನ್ನು ಇತ್ಯರ್ಥಮಾಡಿಕೊಂಡು ಬರಲು ಹೇಳಿದರು. ಈ ದಾವೆಯನ್ನು ಹೂಡಿದ ನಂತರ ನಾನು ಕಿತ್ತೂರು ಪೊಲೀಸ ಠಾಣೆಗೆ ಹೋಗಿರುತ್ತೇನೆ. ಈ ದಾವೆಯನ್ನು ಹೂಡುವ ಪೂರ್ವದಲ್ಲಿ ನಾನು ಠಾಣೆಗೆ

ಹೋಗಿರುವುದಿಲ್ಲ. ಈ ದಾವೆಯನ್ನು ಹೂಡಿದ 2-3 ತಿಂಗಳ ನಂತರ ಠಾಣೆಗೆ ಹೋಗಿರುತ್ತೇನೆ.

**ಈ ಹಂತದಲ್ಲಿ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯವನ್ನು ಕೋರಿದ್ದರಿಂದ, ಆಲಿಸಿ ಸಮಯ ನೀಡಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಅದೆ.

**ದಿವಾಣಿ ನ್ಯಾಯಾಧೀಶರು, ಕಿತ್ತೂರ.**